ಬೆರಳುಗಳ ನಡುವಿನ ಇಳಿಜಾರುಗಳಲ್ಲಿ ಸೋರಿಹೋಗುವ ನೀರಹನಿಗಳಂತೆ, ನೋಡನೋಡುತ್ತಿರುವಂತೆ ವರ್ಷವೊಂದು ಇತಿಹಾಸದ ಪುಟಗಳಿಗೆ ಸೇರುತ್ತಿದೆ. 'ಕಾಲ ಕಳೆದುಹೋಗುತ್ತದೆ' ಎನ್ನುವ ಮಾತು ಪೂರ್ಣ ಸತ್ಯವಾದುದೇನಲ್ಲ. ಅದು, ನೆನಪುಗಳ ರೂಪದಲ್ಲಿ, ಪರಿಣಾಮದ ರೂಪದಲ್ಲಿ ನಮ್ಮೊಡನೆ ಉಳಿಯುತ್ತದೆ. ಕಾಲದ ಕಲೆಗಳು ಗಾಯಗಳ ರೂಪದಲ್ಲೂ ಉಳಿದು, ಮತ್ತೆ ಮತ್ತೆ ಕಳೆದ ಸಮಯವನ್ನು ನೆನಪಿಗೆ ತರಬಹುದು. 2022ರ ಕ್ಯಾಲೆಂಡರ್ ವರ್ಷವನ್ನೇ ನೋಡಿ. ಸೋಂಕಿನ ಬಾಧೆ ತಿಳಿಯಾದ ವರ್ಷದಲ್ಲೇ ಯುದ್ಧದ ಕಬಂಧಹಸ್ತಗಳೂ ವಿಶ್ವವನ್ನು ಆವರಿಸಿಕೊಂಡಿವೆ. ಇವುಗಳ ಪರಿಣಾಮ ವರ್ಷದೊಂದಿಗೆ ಕಳೆದುಹೋಗುತ್ತದೆಂದು ಭಾವಿಸಲಾದೀತೆ? ನಮ್ಮ ಬದುಕು–ಭಾವಕೋಶವನ್ನು ಯಾವುದೋ ರೀತಿಯಲ್ಲಿ ಪ್ರಭಾವಿಸಿದ, ಪರಿಣಾಮ ಬೀರಿದ 22 ವಿದ್ಯಮಾನಗಳ ಕುರಿತ ಇಲ್ಲಿನ ಟಿಪ್ಪಣಿಗಳು, ಕಾಲದ ವೈಚಿತ್ರ್ಯವನ್ನೇ ಬೆಟ್ಟುಮಾಡಿ ತೋರುತ್ತಿರುವಂತಿವೆ. ಈ ಘಟನೆಗಳು, ಬೀಳ್ಕೊಡುತ್ತಿರುವ ವರ್ಷದ ಸ್ವರೂಪವನ್ನು ಸ್ಪಷ್ಟಪಡಿಸಿಕೊಳ್ಳುವುದರ ಜೊತೆಗೆ, ಸ್ವಾಗತಿಸುವ ವರ್ಷದ ಕುರಿತು ನಮ್ಮ 'ನಡೆ' ಯಾವ ಬಗೆಯದಾಗಿರಬೇಕು ಎನ್ನುವುದನ್ನೂ ಸೂಚಿಸುವಂತಿವೆ.

**ಕಾವ್ಯಶ್ರೀ ಎನ್‌ | ಮಹತಿ | ವಿ.ಆರ್‌**

